ಸಿಂಡ್ರೋಮ್' ಬಗ್ಗೆ ಅವಶ್ಯವಾಗಿ ಕೇಳಿರಬೇಕು... ಇದೊಂದು ಅಸಾಮಾನ್ಯ ಮನೋವೈಜ್ಞಾನಿಕ ಘಟನೆಯನ್ನು ಚರಿತಾರ್ಥಗೊಳಿಸುತ್ತದೆ. ಪೀಡಿತರಾದವರಿಗೆ, ಆಕ್ರಮಣಕಾರರ ಬಗ್ಗೆ ಸಹಾನುಭೂತಿ ಹುಟ್ಟುತ್ತದೆ. ಅದೇ ರೀತಿಯಲ್ಲಿ ಹಿಂಸೆಗೊಳಗಾದ ಮಹಿಳೆಯರು ತಮ್ಮ ಕ್ರೂರ ಪತಿಯರಿಂದ ಒಂದು ಅನೈತಿಕ ರಕ್ಷಣಾತ್ಮಕ ಸಂಬಂಧವನ್ನು ಮನಗಾಣುತ್ತಾರೆ, ಅವರು ಅದೆಷ್ಟು ಅಭ್ಯಸ್ಥರಾಗುತ್ತಾರೆಂದರೆ, ಹಿಂಸಿಸುವ ಪತಿಯನ್ನು ಅವರು ತ್ಯಜಿಸಲಾರರು.

'ಅನೇಕ ಪುರುಷರು ಸಹ ಮಹಿಳೆಯರಿಂದ ಹಿಂಸೆಗೊಳಗಾಗಿರುತ್ತಾರೆ' ಎಂದು ಪಾಲ್ ಬೇಸರದಿಂದ ಹೇಳಿದ.

'ಪಾಲ್, ನೀವು ಹೇಳುತ್ತಿರುವುದು ಸರಿ. ಎಲ್ಲಾ ಪುರುಷರು ಕೆಟ್ಟವರಲ್ಲ, ಎಲ್ಲಾ ಮಹಿಳೆಯರು ಒಳ್ಳೆಯವರಲ್ಲ. ದೂರಕ್ಕೆ ಏಕೆ ಹೋಗುವುದು, ನಾನು ನನ್ನ ಮನೆ–ಪರಿವಾರದಲ್ಲಿಯೇ ಕೆಲವು ಪುರುಷರು ತಮ್ಮ ತಾಯಿ, ಸಹೋದರಿ, ಅತ್ತಿಗೆ, ಹೆಂಡತಿ, ನಾದಿನಿಯವರಿಂದ ಹಿಂಸೆಗೊಳಗಾಗಿದ್ದನ್ನು ನೋಡಿದ್ದೇನೆ. ಈಗ ಯೌವನಕ್ಕೆ ಕಾಲಿಟ್ಟಿರುವ ನನ್ನ ಮಗ ಜೋಶುಆ, ಒಂದು ಚಿಟ್ಟೆಗೂ ಹೊಡೆಯಲಾರ. ನಾನು ಅವನ ತಾಯಿಯೆಂದು ಅವನನ್ನು ಹೊಗಳುತ್ತಿಲ್ಲ. ಅವನು ನಿಜವಾಗಿಯೂ ಸಜ್ಜನ ಮತ್ತು ಒಳ್ಳೆಯ ಮನುಷ್ಯ. ಪಾಲ್, ನೀವೂ ಸಹ ಪುರುಷರೇ. ನಾನು ನಿಮ್ಮಲ್ಲಿ ದೇವರನ್ನು ನೋಡುತ್ತೇನೆ'.

'ಕ್ರೀಸೆಸೆಂಟರ್‌ನಲ್ಲಿ ನೀವೆಷ್ಟು ದಿನ ಇದ್ದಿರಿ?' ಪಾಲ್ ನನ್ನ ಮಾತಿಗೆ ಮುಗುಳ್ನಗುತ್ತಿದ್ದಾನೆ.

ಕ್ರೀಸೆಸೆಂಟರ್ ಖಂಡಿತವಾಗಿ ದುರ್ಬಲ ಮಹಿಳೆಯರಿಗೆ ಧ್ವನಿ ಎತ್ತಲು ಮತ್ತು ಹಿಂಸೆಯ ವಿರುದ್ಧ ಹೆಜ್ಜೆ ಹಾಕಲು ಅವರಿಗೆ ಸಹಾಯವನ್ನು ಮಾಡುತ್ತಿತ್ತು. ನನಗೆ ಆಶ್ರಯಕೊಟ್ಟ ಕ್ರೀಸೆಸೆಂಟರ್‌ಗೆ ನಾನು ಆಭಾರಿಯಾಗಿದ್ದೆ. ಅಲ್ಲಿಗೆ ಆಶ್ರಯ ಪಡೆಯಲು ಬಂದ ಮಹಿಳೆಯರ ಬಗ್ಗೆ ನನ್ನ ಸಂಪೂರ್ಣ ಸಹಾನುಭೂತಿಯಿತ್ತು. ಆದರೆ ಅಲ್ಲಿ ಹೆಚ್ಚು ದಿನಗಳಿರಲು ನನ್ನ ಮನಸ್ಸು ಒಪ್ಪಲಿಲ್ಲ. ನಾನು ಒಂಟಿಯಾಗಿದ್ದೆ, ಆದರೆ ನಾನು ಅಸಹಾಯಕಳಾಗಿರಲಿಲ್ಲ. ಆ ಸ್ಥಳ ಒಂಟಿ ಮಹಿಳೆಯರಿಗಲ್ಲ, ದುರ್ಬಲ ಮತ್ತು ಅಸಹಾಯಕ ಮಹಿಳೆಯರಿಗಿತ್ತು. ಅಲ್ಲಿ ನಾನು ಬಹುಶಃ ನಾಲ್ಕೈದು ದಿನಗಳಿದ್ದೆ. ನಂತರ ಅಲ್ಲಿಂದ ಹೋಗುತ್ತಿರುವುದಾಗಿ ಹೇಳಿದೆ...'

'ಗುಡ್‌ಲಕ್!' ಎಂದರು ಅವರು.

ನಾನು ಹೋಗುತ್ತಿದ್ದೇನೆ ಎಂದು ತಕ್ಷಣ ಹೇಳಿದೆ. ಆದರೆ ಎಲ್ಲಿಗೆ ಹೋಗಲಿ? ನನ್ನ ಮನೆಗೆ ಅಂದರೆ ಲಾರ್ಸ್‌ನ ಮನೆಗೆ? ಆ ಮನೆ ನೆನಪಿಗೆ ಬರುತ್ತಲೇ, ಅಲ್ಲಿ ನನಗೆ ಬಿದ್ದ ಹೊಡೆತಗಳು, ಅತ್ಯಾಚಾರಗಳು ಕಣ್ಣುಗಳೆದುರಿಗೆ ಮತ್ತೊಮ್ಮೆ ಮೂಡಿದವು. ಮನಸ್ಸು ಕಹಿಯಾಯಿತು. ಮನೆಯೊಂದು ಮಂದಿರ, ಆದರೆ ಅದು ಒಮ್ಮೊಮ್ಮೆ ಅಪಾಯದ ಜಾಗವಾಗುತ್ತದೆ. ಆದರೂ ನಾನಲ್ಲಿಗೆ ನನ್ನ ಕೆಲವು ವಸ್ತುಗಳನ್ನು ತೆಗೆದುಕೊಳ್ಳಲು ಹೋಗಬೇಕಾಯಿತು. ಉಳಿದ ಸಾಮಾನುಗಳನ್ನು

## ಕಳೆದ ಸಂಚಿಕೆಯಲ್ಲಿ



ಲಾರ್ಸ್‌ನೊಂದಿಗಿನ ದಾಂಪತ್ಯ ನ್ಯಾನ್ಸಿಗೆ ಅಹಿತಕರವಾಗಿ ಪರಿಣಮಿಸಿತು. ಪತ್ನಿಯನ್ನು ಸಾರ್ವಜನಿಕವಾಗಿ ಹಿಂಸಿಸಲು ಅವನು ಹಿಂಜರಿಯುತ್ತಿರಲಿಲ್ಲ. ನ್ಯಾನ್ಸಿಯ ಮೊದಲ ಪತಿ ಅಬ್ರಹಾಮ್ ಲಂಪಟನಾಗಿದ್ದರೂ ಪತ್ನಿಯನ್ನು ಎಂದಿಗೂ ಕೆಟ್ಟದಾಗಿ ನಡೆಸಿಕೊಂಡಿರಲಿಲ್ಲ. ಲಾರ್ಸ್‌ಗೆ ತನ್ನ ಮಾತು ಮತ್ತು ನಡವಳಿಕೆಯ ಬಗ್ಗೆ ಹಿಡಿತವೇ ಇರಲಿಲ್ಲ. ಅವನ ಬಾಲ್ಯ ಕೆಟ್ಟದಾಗಿತ್ತು ಹಾಗೂ ಅಪಘಾತವೊಂದರಲ್ಲಿ ಅವನು ಸಂತಾನಶಕ್ತಿ ಕಳೆದುಕೊಂಡಿರುವ ವಿಷಯ ತಿಳಿದ ನಂತರ ನ್ಯಾನ್ಸಿ ಮತ್ತಷ್ಟು ಖಿನ್ನಳಾದಳು. ತನ್ನ ಬಂಡವಾಳ ಬಯಲಾದರೂ, ನ್ಯಾನ್ಸಿಯ ಮಗ ಜೋಶುಆನನ್ನು ತನ್ನ ಮಗನೆಂದು ಒಪ್ಪಿಕೊಳ್ಳಲು ಲಾರ್ಸ್ ನಿರಾಕರಿಸಿದ. ಪೊಲೀಸ್ ಠಾಣೆಯಲ್ಲಿ ದೂರು ದಾಖಲಾದ ನಂತರವೂ ಪತ್ನಿಯ ಕುರಿತ ಅವನ ಹಿಂಸಾತ್ಮಕ ವರ್ತನೆ ಬದಲಾಗಲಿಲ್ಲ. ಅವನ ಅನಾಗರಿಕ ವರ್ತನೆಯಿಂದ ನ್ಯಾನ್ಸಿ ಗಾಸಿಗೊಂಡಾಗ, ಲಾರ್ಸ್ ಪೊಲೀಸರಿಗೆ ಸೆರೆಯಾದ. ಆ ಮೂಲಕ ನ್ಯಾನ್ಸಿಯ ಎರಡನೇ ಸಂಬಂಧವೂ ಅಂತಿಮಹಂತ ತಲುಪಿತು. ಅವಳು ಮತ್ತೊಮ್ಮೆ ಒಂಟಿಯಾದಳು.

ನಂತರ ತೆಗೆದುಕೊಂಡು ಹೋಗಲು ಯೋಚಿಸಿದೆ.

ಜೂನ್ ತಿಂಗಳ ಆರಂಭ. ಶಾಲೆಗೆ ಜೂನ್ ಇಪ್ಪತ್ತೆರಡರಿಂದ ಬೇಸಿಗೆ ರಜಾ ಆರಂಭವಾಗುತ್ತಿತ್ತು. ನಾನು ಇನ್ನೆರಡು ವಾರಗಳ ಹೆಚ್ಚುವರಿ ರಜೆ ಪಡೆದು ಇಂಡಿಯಾ, ಮಲಪ್ಪುರಮ್‌ನಲ್ಲಿದ್ದ ನನ್ನ ಅಪ್ಪನ ಬಳಿಗೆ ಹಾರಿದೆ. ನನ್ನ ಮನಸ್ಸು ನನ್ನ ತಂದೆಯ ಬಳಿಗೆ ಹೋಗಿ, ಅವರ ವಾತ್ಸಲ್ಯದಲ್ಲಿ ಮೈಮರೆತು, ನನ್ನ ದುಃಖವನ್ನು ಕಕ್ಕಲು ಚಡಪಡಿಸುತ್ತಿತ್ತು. ಈ ಸ್ಥಳ ತುಂಬಾ ಅಸುರಕ್ಷಿತ, ನನ್ನ ಬಾಲ್ಯದ ಮನೆಯ ಆ ಸುರಕ್ಷಿತ ವಾತಾವರಣದಲ್ಲಿ ಮತ್ತೆ ಬದುಕಲು ಮನಸ್ಸು ಹಾತೊರೆಯುತ್ತಿತ್ತು.

## ಭಾರತ (ಏಷ್ಯಾ)

ಅಪ್ಪ ತುಂಬಾ ವೃದ್ಧರಾಗಿದ್ದರು. ಅವರು ಒಂಟಿಯಾಗಿರುತ್ತಿದ್ದರು. ನಮ್ಮ ಸಮೀಪದಲ್ಲಿ ಮುಸ್ಲಿಮ್ ಪರಿವಾರವಿತ್ತು. ಮುಖ್ಯಸ್ಥನ ಹೆಸರು ಮೊಪ್ಪಿಲ್ಲಾ. ಅವರ ಮಗಳು ಸಕೀನಾ ನನ್ನ ಬಾಲ್ಯದ ಗೆಳತಿಯಾಗಿದ್ದಳು. ಆ ಮುಸ್ಲಿಮ್ ಪರಿವಾರದೊಂದಿಗೆ ನಮ್ಮ ಗೆಳೆತನ, ಹಗೆತನ ಮತ್ತೆ ಗೆಳೆತನ – ಹೀಗೆ ದೀರ್ಘ ಕಾಲದ ನಂಟಿತ್ತು. ಆದರೆ ತಮ್ಮ ಕೊನೆಯ ದಿನಗಳಲ್ಲಿ ಅಸರಫ್ ಅಂಕಲ್ ಅಂದರೆ ಸಕೀನಾಳ ತಂದೆ ನನ್ನ ಅಪ್ಪನ ವಿಶೇಷ ಮಿತ್ರರಲ್ಲಿ ಒಬ್ಬರಾಗಿದ್ದು, ಅವರಿಗೆ ಒಳ್ಳೆಯ ಜೊತೆಗಾರರಾಗಿದ್ದರು, ಅಪ್ಪನಿಗೆ ಸಹಕಾರವನ್ನು ಕೊಡುತ್ತಿದ್ದರು. ಮನೆಯಿಂದ ಮುನ್ನೂರು ಮೀಟರ್ ದೂರದಲ್ಲಿ, ಇನ್ನೊಂದು ಗಲ್ಲಿಯಲ್ಲಿ ಪಾಪುನ್‌ರ (ಅಪ್ಪನ ತಮ್ಮನ) ಮನೆಯಿತ್ತು. ಅಪ್ಪನ ದುಃಖದಲ್ಲಿ ಮತ್ತು ಅವರು ಕಾಯಿಲೆ ಬಿದ್ದಾಗ ಪಾಪುನ್ ಅವರನ್ನು ನೋಡಿಕೊಳ್ಳುತ್ತಿದ್ದರು. ನಮ್ಮ ಅಪ್ಪನನ್ನು ನೋಡಿಕೊಳ್ಳುವವರು ಇದ್ದಾರೆ, ಅವರು ಒಂಟಿಯಲ್ಲ ಎಂದು ನಾವು ಮೂವರು ಸಹೋದರರು ಮತ್ತು ಸಹೋದರಿ ನಿಶ್ಚಿಂತರಾಗಿದ್ದೆವು. ಕುಂಜಮ್ಮಾ ನೂರು ಗಜದ ಅಂತರದಲ್ಲಿ ವಾಸಿಸುತ್ತಿದ್ದರು. ಆದರೆ ಸಮಯ ಮತ್ತು ಪರಿಸ್ಥಿತಿಗಳು ಕುಂಜಮ್ಮಾಳೊಂದಿಗಿನ ನಮ್ಮ ಸಂಬಂಧವನ್ನು ಹಳತು ಮಾಡಿತ್ತು. ನಾವು ಪಾಪುನ್ನರ ಪರಿವಾರದೊಂದಿಗೆ ಹೆಚ್ಚು ಕಲೆತಿದ್ದೆವು.

ಕುಂಜಮ್ಮಾ ಅವಶ್ಯಕತೆಗಿಂತ ಹೆಚ್ಚು ನಮ್ಮ ಪರಿವಾರದಲ್ಲಿ ತಲೆ ಹಾಕಲಾರಂಭಿಸಿದ್ದರು. ಅಪ್ಪನ ಬಗ್ಗೆ ಚುಚ್ಚಿ ಮಾತನಾಡುತ್ತಿದ್ದರು. ಜಾರ್ಜ್ ಹೆಂಡತಿ ರೀಬಾರ ಬಗ್ಗೆ ಅತ್ತೆಯ ದರ್ಪವನ್ನು ತೋರಿಸುತ್ತಿದ್ದರು. ರೀಬಾಳಿಗೆ ಮೊದಲ ದಿನವೇ ಅವರ ಗುಣ ಹಿಡಿಸಲಿಲ್ಲ. ಅವಳು ನಮಗೆ, ಕುಂಜಮ್ಮಾ ತುಂಬಾ ಉಗ್ರ ಸ್ವಭಾವದವರು, ತಮ್ಮ ಸಹೋದರಿಯ ಪರಿವಾರದವರ ಮೇಲೆ ಆಡಳಿತ ನಡೆಸಲು ಬಯಸುತ್ತಾರೆ, ಅವರಿಂದ ಸ್ವಲ್ಪ ದೂರವಿರಿ ಎಂದು ಅವರನ್ನು ನಿಂದಿಸುತ್ತಿದ್ದಳು. ಕುಂಜಮ್ಮಾ ರೀಬಾ ಬಗ್ಗೆ, ರೀಬಾ ನನಗೆ ಗೌರವವನ್ನೇ ಕೊಡಲ್ಲ. ನಮಗೆಲ್ಲಾ ಬೇಸರವಾಗಿದೆ ಎಂದು ದೂರುತ್ತಿದ್ದರು. ಎರಡೂ ಕಡೆಯಿಂದ ದೂರುಗಳಿವೆ. ಜೀವನದ ಸಮಸ್ಯೆಗಳನ್ನು ನಿಭಾಯಿಸುವಲ್ಲಿ ನಮ್ಮ ಅಪ್ಪ ಅದೆಷ್ಟು ಅಸಮರ್ಥರಾಗಿದ್ದರು, ಯಾರೂ ಯಾರ ಬಗ್ಗೆ ಸಂತಸದಿಂದ ಇರಲಿಲ್ಲ ಎಂದು ಒಮ್ಮೊಮ್ಮೆ ಅನ್ನಿಸುತ್ತಿತ್ತು.

ನಮ್ಮ ವಿದ್ಯಾಭ್ಯಾಸ, ವಿವಾಹ, ನೌಕರಿ, ದುಃಖ, ಕಾಯಿಲೆ ಯಾವುದೇ ಮಗ್ಗುಲಿರಲಿ, ಕುಂಜಮ್ಮಾ ಅಪ್ಪನೊಂದಿಗೆ ಜಗಳವಾಡುತ್ತಿದ್ದರು. 'ನಾವು ನಿಮ್ಮ ಸಹೋದರಿಯ ಮಕ್ಕಳು. ನಿಮ್ಮ ಸಹೋದರಿ ಸಾಯುವುದಕ್ಕೆ ಮೊದಲು, ನಿಮ್ಮನ್ನು ನೋಡಿಕೊಳ್ಳಲು ಹೇಳಿದ್ದರು' ಎಂದು ಹೇಳುತ್ತಿದ್ದರು. 'ನನ್ನ ಮಕ್ಕಳು ಈಗ ವಯಸ್ಸಿಗೆ ಬಂದಿದ್ದಾರೆ, ಅವರಿಗೆ ಯಾರ ಸಲಹೆಯ ಅವಶ್ಯಕತೆಯಿಲ್ಲ. ತಮ್ಮ ಜೀವನಕ್ಕೆ ಸಂಬಂಧಿಸಿದ